ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ.
ಕೇಂದ್ರ ಕಛೇರಿ, ಸಾರಿಗೆ ಸದನ
ಮುಖ್ಯ ರಸ್ತೆ, ಕಲಬುರಗಿ-585102

**Kalyana Karnataka Road Transport Corporation**
Central Office: Sarige Sadan
Main Road, Kalaburagi-585102

ಸಂಖ್ಯೆ: ಕಕಸಾ/ಕೇಕ/ಸಿಬ್ಬಂದಿ/ಪಿ4/ವರ್ಗ/ಕ-76/1772/2025-26 ದಿನಾಂಕ:20.11.2025

**-:: ಅಧಿಸೂಚನೆ::-**

ವಿಷಯ: 2025ನೇ ಸಾಲಿನ ಆನ್‌ಲೈನ್ ವರ್ಗಾವಣೆ ಕುರಿತು.

ಉಲ್ಲೇಖ: 1) ಸುತ್ತೋಲೆ ಸಂಖ್ಯೆ:80/2021 ದಿನಾಂಕ:20.07.2021.
2) 2025ನೇ ಸಾಲಿನ ವರ್ಗಾವಣೆ ಸಭೆಯ ನಡವಳಿ ದಿನಾಂಕ:27.10.2025.

*****

ಕಕರಸಾ ನಿಗಮದ ವ್ಯಾಪ್ತಿಯೊಳಗೆ ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4ರ ಸಿಬ್ಬಂದಿಗಳ ವರ್ಗಾವಣೆ ಕುರಿತು ಉಲ್ಲೇಖ (1)ರ ಸುತ್ತೋಲೆಯಲ್ಲಿನ ಮಾನದಂಡಗಳನುಸಾರ ಅರ್ಹ ಸಿಬ್ಬಂದಿಗಳಿಂದ 2025ನೇ ಸಾಲಿನ ಆನ್‌ಲೈನ್ ಮೂಲಕ ವರ್ಗಾವಣೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. **ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಉಪಯೋಗಿಸಬೇಕಾದ ವೆಬ್ ವಿಳಾಸ: www.kkrtc.org**

ವರ್ಗಾವಣೆ ಪ್ರಕ್ರಿಯೆಯ ಘಟನಾನುಕ್ರಮವು (Calendar of Events) ಈ ಕೆಳಗಿನಂತಿರುತ್ತದೆ.

| ಕ್ರ. ಸಂ | ವರ್ಗಾವಣಾ ಚಟುವಟಿಕೆಗಳು (ವಿಭಾಗದ ಒಳಗೆ ಹಾಗೂ ಅಂತರ ವಿಭಾಗ) | ದಿನಾಂಕ | |
|---|---|---|---|
| | | ರಿಂದ | ವರೆಗೆ |
| 1 | ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ. | 01.12.2025 | 31.12.2025 |
| 2 | ಸಂಬಂಧಿಸಿದ ವಿಭಾಗಮಟ್ಟದ ಸಿಬ್ಬಂದಿ ಶಾಖೆಯಿಂದ ಅರ್ಜಿಗಳನ್ನು ಪರಿಶೀಲಿಸಿ, ಸರಿಯಾಗಿರುವ ಬಗ್ಗೆ ಹಾಗೂ ವ್ಯತ್ಯಾಸಗಳಿದ್ದಲ್ಲಿ ಪರಿಪಡಿಸಿ, ಅವಶ್ಯ ಸೇವಾ ವಿವರಗಳನ್ನು ಭರ್ತಿ ಮಾಡುವುದು. | 01.01.2026 | 25.01.2026 |
| 3 | ಗಣಕ ಶಾಖೆಯಿಂದ ವರ್ಗಾವಣೆಗೆ ಅರ್ಹರಿರುವ ಸಿಬ್ಬಂದಿಗಳ ಯೂನಿಟ್‌ವಾರು ಅರ್ಹತಾ ಪಟ್ಟಿಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು. | 26.01.2026 | 31.01.2026 |
| 4 | ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ ಅರ್ಹತಾ ಪಟ್ಟಿಗೆ ಅರ್ಜಿದಾರರು ಆಕ್ಷೇಪಣೆಗಳನ್ನು (ಇದ್ದಲ್ಲಿ) ಆಯಾ ಯೂನಿಟ್ ಮುಖ್ಯಸ್ಥರಿಗೆ ಸಲ್ಲಿಸುವುದು. | 01.02.2026 | 25.02.2026 |
| 5 | ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಪರಿಶೀಲಿಸಿ, ಸರಿಪಡಿಸಿದ ನಂತರ, ಅಂತರ ವಿಭಾಗ ವರ್ಗಾವಣಾ ಅರ್ಜಿಗಳೊಂದಿಗೆ ದೃಡೀಕೃತ ಪಟ್ಟಿಯನ್ನು ಆಯಾ ಇಲಾಖಾ ಮುಖ್ಯಸ್ಥರಿಗೆ ಹಾಗೂ ವಿಭಾಗದೊಳಗಿನ ವರ್ಗಾವಣಾ ಅರ್ಜಿಗಳೊಂದಿಗೆ ದೃಡೀಕೃತ ಪಟ್ಟಿಯನ್ನು ವಿಭಾಗದ ವರ್ಗಾವಣಾ ಸಮಿತಿಗೆ ಸಿಬ್ಬಂದಿ ಶಾಖೆಯಿಂದ ಸಲ್ಲಿಸುವುದು. | 26.02.2026 | 01.03.2026 |
| 6 | ಆಯಾ ವರ್ಗಾವಣಾ ಸಮಿತಿಗಳು ವರ್ಗಾವಣಾ ಆದೇಶಗಳನ್ನು ಹೊರಡಿಸಿ, ಕಡ್ಡಾಯವಾಗಿ ಅನುಸರಣಾ ವರದಿಯನ್ನು ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಕಲಬುರಗಿ ರವರಿಗೆ ಸಲ್ಲಿಸುವುದು. | 04.03.2026 | 15.03.2026 |
| 7 | ವರ್ಗಾವಣೆಗೊಂಡ ಸಿಬ್ಬಂದಿಗಳನ್ನು ಬಿಡುಗಡೆಗೊಳಿಸುವುದು. | 01.06 2026 | 30.06.2026 |

**ಪುಟ ಮುಂದುವರೆದಿದೆ...**

ವರ್ಗಾವಣೆ ಅರ್ಜಿಯನ್ನು ಪರಿಗಣಿಸುವ ಕುರಿತು ನಿಗದಿತ ವರ್ಗಾವಣಾ ಸಮಿತಿಗಳ/ ಸಕ್ಷಮ ಪ್ರಾಧಿಕಾರಸ್ಥರ ತೀರ್ಮಾನವೇ ಅಂತಿಮವಾಗಿರುತ್ತದೆ. ಹುದ್ದೆವಾರು ಲಭ್ಯ ಇರುವ ಖಾಲಿ ಸ್ಥಾನಗಳಿಗೆ ಅನುಗುಣವಾಗಿ ಮಾತ್ರ ವರ್ಗಾವಣಾ ಅರ್ಜಿಗಳನ್ನು ಪರಿಗಣಿಸಲಾಗುವುದು. ನಿರ್ದಿಷ್ಟ ವಿಭಾಗ ಕಾರ್ಯಕ್ಷೇತ್ರದಲ್ಲಿ ಖಾಲಿ ಹುದ್ದೆ ಇದ್ದಾಗ್ಯೂ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ವಿಭಾಗ/ ಕಾರ್ಯಕ್ಷೇತ್ರಗಳಲ್ಲಿ ಇರುವ ಕೊರತೆ ಪ್ರಮಾಣ ಹಾಗೂ ನಿಗಮದ ಒಟ್ಟಾರೆ, ಕಾರ್ಯನಿರ್ವಹಣೆ/ ಖಾಲಿಸ್ಥಾನವನ್ನು ಪರಿಗಣಿಸಿ, ಅವಶ್ಯ ಕಂಡುಬಂದಲ್ಲಿ ಮಾತ್ರ ವರ್ಗಾವಣೆಗೆ ಪರಿಗಣಿಸಲಾಗುವುದು ಖಾಲಿ ಸ್ಥಾನ ಇದ್ದ ಕಾರಣಕ್ಕೆ ವರ್ಗಾವಣೆಗೆ ಪರಿಗಣಿಸಲಾಗುವುದಿಲ್ಲ. ವರ್ಗಾವಣೆಗೆ ಅರ್ಜಿ ಸಲ್ಲಿಸಲು ಯಾವುದೇ ರೀತಿಯ ತಾಂತ್ರಿಕ ಅಡಚಣೆ ಉಂಟಾದಲ್ಲಿ, ಕೂಡಲೇ ಸಂಬಂಧಿಸಿದ ವಿಭಾಗದ ಆಡಳಿತಾಧಿಕಾರಿಗಳ ಗಮನಕ್ಕೆ ತರುವುದು.

ಮೇಲಿನ ಘಟನಾನುಕ್ರಮದಂತೆ ಯಾವುದೇ ದೂರಿಗೆ ಆಸ್ಪದವಾಗದಂತೆ ಆನ್‌ಲೈನ್ ವರ್ಗಾವಣಾ ಪ್ರಕ್ರಿಯೆಯನ್ನು ಕೈಗೊಂಡು ಮುಕ್ತಾಯಗೊಳಿಸಲು ಸೂಚಿಸಲಾಗಿದೆ.

(ಸಹಿ)

**ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು**

**ಪ್ರತಿಯನ್ನು:**

- ✓ ಮುಖ್ಯ ಗಣಕ ವ್ಯವಸ್ಥಾಪಕರು, ಕಕರಸಾ ನಿಗಮ ರವರ ಮಾಹಿತಿಗಾಗಿ ಹಾಗೂ **ಮೇಲ್ಕಂಡ ಘಟನಾನುಕ್ರಮದಂತೆ ಆನ್‌ಲೈನ್ ಮೂಲಕ ವರ್ಗಾವಣೆ ಪ್ರಕ್ರಿಯೆ ಜರುಗಿಸುವುದಕ್ಕೆ ಪೂರಕವಾಗಿ ದಿನಾಂಕ:01.12.2025 ರೊಳಗಾಗಿ ತಂತ್ರಾಂಶಕ್ಕೆ ಸಂಬಂಧಪಟ್ಟ ಎಲ್ಲಾ ಅಗತ್ಯ ಸಿದ್ಧತೆಯನ್ನು ಕೈಗೊಳ್ಳಲು ಹಾಗೂ ಸದರಿ ಅಧಿಸೂಚನೆಯನ್ನು ಸಿಬ್ಬಂದಿಗಳ ಗಮನಕ್ಕಾಗಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.**
- ✓ ಎಲ್ಲಾ ಇಲಾಖಾ ಮುಖ್ಯಸ್ಥರು, ಕಕರಸಾ ನಿಗಮ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
- ✓ ಎಲ್ಲಾ ಹಿರಿಯ/ ವಿಭಾಗೀಯ ನಿಯಂತ್ರಣಾಧಿಕಾರಿಗಳು/ ಪ್ರಾಂಶುಪಾಲರು/ ಕಾರ್ಯ ವ್ಯವಸ್ಥಾಪಕರು/ ಕಾರ್ಯ ನಿರ್ವಾಹಕ ಅಭಿಯಂತರರು. ಕಕರಸಾ ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
- ✓ ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಹಿರಿಯ ಆಪ್ತ ಕಾರ್ಯದರ್ಶಿ, ಕಕರಸಾ ನಿಗಮ ರವರ ಮಾಹಿತಿಗಾಗಿ.